

ಮೇರಿ ಮತ್ತು ಪಿಯೆರ್ ದಂಪತಿ

**ಮೇರಿ ಕ್ಯೂರಿ ವಿಶ್ವ ಕಂಡ ಅಸಾಧಾರಣ ವಿಜ್ಞಾನಿ. ಆಕೆಯ ಜೀವನದಲ್ಲಿ ವಿಜ್ಞಾನದೊಂದಿಗೆ ಪ್ರೇಮಕ್ಕೂ ಸಮಯವಿತ್ತು ಎನ್ನುವುದು ಬಹಳ ಜನರಿಗೆ ತಿಳಿಯದು. ಒಂದಲ್ಲಾ ಮೂವರು ಗಂಡಸರು ಆಕೆಯ ಜೀವನದಲ್ಲಿ ಬಂದುಹೋದರು. ಮೂವರೂ ಅಪ್ರತಿಮ ವಿಜ್ಞಾನಿಗಳು. ಮೇರಿಯ ಪ್ರೇಮ ಪ್ರಕರಣಗಳು ವ್ಯಕ್ತಿ ತನ್ನ ವೃತ್ತಿಯಲ್ಲಿ ಅದೆಷ್ಟೇ ಸಾಧನೆ ಮಾಡಿದರೂ, ಅಂತರಂಗದಲ್ಲಿ ಮಾನವೀಯ ಸಂಬಂಧಗಳಿಗಾಗಿ ತುಡಿಯುವುದಕ್ಕೆ ಉದಾಹರಣೆಗಳಂತಿವೆ.**

ಕಾಜಿಮಿಯೆರ್, ಪ್ರೇಮಿಯಾಗಿ ನಿಟ್ಟುಸಿರು ಬಿಟ್ಟು, ಮಗನಾಗಿ ವಿಧೇಯನಾದ.

ಮಾನ್ಯಾ ಅವನ ಮನಸ್ಸು ಬದಲಾಗಬಹುದೆಂದು ನಾಲ್ಕು ವರ್ಷ ಕಾದಿದ್ದಳು. ಆದರೆ ಕಾಜಿಮಿಯೆರ್ ಬೇರೆ ಹಾದಿಹಿಡಿದ. ತನಗೆ ಅವಮಾನವಾದರೂ, ಎಲ್ಲವನ್ನೂ ಸಹಿಸಿಕೊಂಡು ಮಾನ್ಯಾ ಅದೇ ಕುಟುಂಬದೊಡನೆ ಇನ್ನೂ ಹದಿನೈದು ತಿಂಗಳು ಕಳೆದನಂತರ ಪ್ಯಾರಿಸ್ಸಿಗೆ ಟ್ರೈನ್ ಹಿಡಿದಳು.

ಕಾಜಿಮಿಯೆರ್ ಜೊರೌಸ್ಕಿ ಮುಂದೆ ಗಣಿತದಲ್ಲಿ ಪದವಿ ಪಡೆದುದಲ್ಲದೇ ಎರಡು ಡಾಕ್ಟೊರೇಟುಗಳನ್ನೂ ಗಳಿಸಿದ. ವಾರ್ಸಾದಲ್ಲಿ ಗಣಿತದ ಪ್ರಾಧ್ಯಾಪಕನಾದ. **Differential forms, integral invariants of Lie groups, differential geometry,** ದ್ರವಚಲನೆ, ಮುಂತಾದ ಕ್ಷೇತ್ರಗಳಲ್ಲಿ ಪ್ರಶಂಸನೀಯ ಸಂಶೋಧನೆಗಳನ್ನು ನಡೆಸಿದ. ಹೀಗಾಗಿ ಅವನನ್ನು ಪೋಲೆಂಡಿನ ಗಣನೀಯ ಗಣಿತಜ್ಞರಲ್ಲಿ ಒಬ್ಬನೆಂದು ಗುರುತಿಸಲಾಗಿದೆ. ಖ್ಯಾತ ಖಗೋಳ ವಿಜ್ಞಾನಿ, ನಿಕೋಲಸ್ ಕೊಪರ್ನಿಕಸ್ ಪಂಕ್ತಿಯಲ್ಲಿಯೇ ಕಾಜಿಮಿಯರ್‌ನನ್ನು ಗುರ್ತಿಸಲಾಗಿದೆ. ಕಾಜಿಮಿಯರ್ ಗಣಿತ ಪ್ರಾಧ್ಯಾಪಕನೊಬ್ಬನ ಮಗಳನ್ನು ಮದುವೆಯಾಗಿ ಮೂರು ಮಕ್ಕಳ ತಂದೆಯಾದ. ತನ್ನ ವೃದ್ಧಾಪ್ಯದಲ್ಲಿ ಅವನು ಪ್ರತಿ ನಿತ್ಯ ವಾರ್ಸಾದಲ್ಲಿರುವ ಮೇರಿ ಕ್ಯೂರಿಯ ಪ್ರತಿಮೆಯ ಮುಂದೆ ಕುಳಿತು ಎವೆಯಿಕ್ಕದೇ ಗಂಟೆಗಳ ಕಾಲ ದಿಟ್ಟಿಸುತ್ತಿದ್ದನಂತೆ!

## ಪಿಯೆರ್ ಕ್ಯೂರಿ (1859-1906)

ಪಿಯೆರ್ ಕ್ಯೂರಿ ಯಾವುದೇ ಸಾಂಪ್ರದಾಯಿಕ ಶಾಲೆಗೆ ಹೋಗದೇ ಮನೆಯಲ್ಲಿಯೇ ಕಲಿತ ಪ್ರತಿಭಾವಂತ. 16ನೇ ವಯಸ್ಸಿನಲ್ಲಿ ಗಣಿತದ ಪದವಿ ಪಡೆದ. 18ನೇ ವಯಸ್ಸಿನಲ್ಲಿ ಭೌತ ವಿಜ್ಞಾನದಲ್ಲಿ ಮಾಸ್ಟರ್ಸ್‌ಗೆ ಸಮನಾದ ಪದವಿ ಲಭಿಸಿತು. ನಂತರ ಪ್ರಯೋಗಶಾಲೆಯಲ್ಲಿ ಸಹಾಯಕನಾಗಿ ದುಡಿಯತೊಡಗಿದ. ಆಯಸ್ಕಾಂತಗಳನ್ನು ಕುರಿತ ಸಂಶೋಧನೆಗಾಗಿ ಡಾಕ್ಟೊರೇಟ್ ಪದವಿ ದೊರೆತು, ಪ್ರಾಧ್ಯಾಪಕನಾಗಿ ತನ್ನ ಸಂಶೋಧನೆಗಳನ್ನು ಮುಂದುವರೆಸಿದ. ಕ್ಯೂರಿ ಮತ್ತು ಅವನ ಅಣ್ಣ ಪಾಲ್ ಜ್ಯಾಕ್, **piezo – electricity** ಕುರಿತು ಅಧ್ಯಯನ ನಡೆಸಿದರು. ಕ್ಯೂರಿ ಕಂಡುಹಿಡಿದ ನಿಯಮ ಮತ್ತು ಸಮೀಕರಣಗಳು ಇಂದಿಗೂ ಪ್ರಚಲಿತವಿವೆ. ಇವಲ್ಲದೆ ಸ್ಫಟಿಕಗಳು ಮತ್ತು ಅವುಗಳ ಆಂತರಿಕ ವಿನ್ಯಾಸಗಳ ಬಗ್ಗೆ ಕ್ಯೂರಿ ಗಣನೀಯ ಕೊಡುಗೆಗಳನ್ನು ನೀಡಿದ್ದಾನೆ.



ಕಾಜಿಮಿಯೆರ್ ಜೊರೌಸ್ಕಿ

ಮಾನ್ಯಾ ಪ್ಯಾರಿಸ್ ತಲುಪಿ ಸೋರ್ಬೋನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಆರಂಭಿಸಿದಳಷ್ಟೇ. ಮಾನ್ಯಾ ಈಗ ಮೇರಿ ಆಗಿ ಗುರ್ತಿಸಿಕೊಂಡು, ಭೌತವಿಜ್ಞಾನದಲ್ಲಿ ವಿಶ್ವವಿದ್ಯಾಲಯಕ್ಕೇ ಮೊದಲ ಸ್ಥಾನ ಪಡೆದಳು. ಸಹಪಾಠಿಗಳು ಮತ್ತಿತರರಿಗೆ ಅದನ್ನು ಸಹಿಸುವುದು ಕಷ್ಟವಾಯಿತು. 'ಮಹಿಳೆ, ಅದರಲ್ಲೂ ಹೊರದೇಶದ ಮಹಿಳೆ ಮೊದಲ ಸ್ಥಾನ ಗಳಿಸುವುದೇ!'.

ಫ್ರಾನ್ಸ್ ಸರ್ಕಾರ ಮೇರಿಗೆ 1400 ಫ್ರಾಂಕುಗಳ ಅನುದಾನ ನೀಡಿ ಆಯಸ್ಕಾಂತಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲು ಪ್ರೋತ್ಸಾಹ ನೀಡಿತು. ಆದರೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸುವುದು ಎಲ್ಲಿ? ಮೇರಿಗೆ ಪ್ರಯೋಗಶಾಲೆಯನ್ನು ನೀಡಲು ಯಾರೂ ಸಿದ್ಧವಿರಲಿಲ್ಲ. ಆಗ ಪೋಲಿಷ್ ಪ್ರಾಧ್ಯಾಪಕನೊಬ್ಬ, 'ಹೋಗಿ ಪಿಯೆರ್ ಕ್ಯೂರಿಯನ್ನು ಭೇಟಿಮಾಡು. ಅವನು ಸಹಾಯ ಮಾಡಿಯಾನು' ಎಂದು ಸೂಚಿಸಿದ.

ಪಿಯೆರ್‌ನನ್ನು ನೋಡಲು ಮೇರಿ ಬಂದಾಗ ಆತ ತನ್ನ ಕಚೇರಿಯ ಕಾರಿಡಾರಿನ ತುದಿಯಲ್ಲಿದ್ದ ಕಿಟಕಿಯ ಬಳಿ ನಿಂತು ಏನನ್ನೋ ವೀಕ್ಷಿಸುತ್ತಿದ್ದ. ಪರಸ್ಪರ ಪರಿಚಯವಾಯಿತು. ಪಿಯೆರ್ ತನ್ನ ಸಂಶೋಧನೆಗಳ ಬಗ್ಗೆ ಮಾತನಾಡಿದ. ಆತನಿಗೆ ಸೋಜಿಗ ಕಾದಿತ್ತು. ಪಿಯೆರ್ ಹೇಳಿದ್ದನ್ನೆಲ್ಲಾ ಅರ್ಥಮಾಡಿಕೊಂಡಿದ್ದಲ್ಲದೇ, ಮೇರಿ ಪ್ರಶ್ನೆಗಳನ್ನೂ ಕೇಳಿದಳು. ಇಬ್ಬರ ನಡುವೆ ಯಾವುದೋ ಕೆಮಿಸ್ಟ್ರಿ ಕೆಲಸಮಾಡಿತ್ತು!

ಅವರಿಬ್ಬರ ಮುಂದಿನ ಭೇಟಿಯಾಗಿದ್ದು ಮೇರಿಯ ವಾಸದ ಕೊಠಡಿಯಲ್ಲಿ. ಆರನೆಯ ಮಹಡಿಯಲ್ಲಿನ ಚಿಕ್ಕ ಕೊಠಡಿ. ಪಿಯೆರ್ ನೂರು ಮೆಟ್ಟಿಲುಗಳನ್ನು ಹತ್ತಿ ಬಂದಿದ್ದ. ಮೇರಿಯ ಬಳಿ ಇದ್ದ ದೊಡ್ಡ ಪೆಟ್ಟಿಗೆಯ ಮೇಲೆ ಕುಳಿತು ಮಾತನಾಡಿದ!

ಮುಂದೆ ಆದುದೆಲ್ಲಾ ಸಿನಿಮಾ ಮಾದರಿ. ಪಿಯೆರ್ ಪ್ರೇಮ ಪ್ರಸ್ತಾಪ ಮಾಡಿದ. ಆದರೆ ಪ್ರೇಮ, ಮದುವೆ ಮುಂತಾದ ಪದಗಳು ಈಗ ಮೇರಿಯ ನಿಘಂಟಿನಲ್ಲಿರಲಿಲ್ಲ. ಕಾಜಿಮಿಯೆರಿನ ಪ್ರಭಾವದಿಂದ ರಮ್ಯ ಭಾವನೆಗಳೆಲ್ಲ ಅಳಿಸಿಹೋಗಿದ್ದವು. ಒಲ್ಲೆ ಎಂದಳು. ಪಿಯೆರ್